— Reference copy —

(5)

ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಘನತ್ಯಾಜ್ಯ ಘಟಕಗಳ ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿಗಾಗಿ ಹೆಚ್ಚುವರಿ ಅನುದಾನವನ್ನು ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್ಎಫ್ಸಿ 2016 (ಭಾಗ-1), ದಿನಾಂಕ: 12-08-2016.

2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆ.ಆ.ಶಾ/ಪಿಆರ್/G-269/2017-18, ದಿನಾಂಕ: 10-04-2017.

3. ಸರ್ಕಾರದ ಪತ್ರ ಸಂಖ್ಯೆ: ನಅಇ 291 ಎಂಎನ್ವೈ 2017, ದಿನಾಂಕ: 16-05-2017.

4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆ.ಆ.ಶಾ/ಬಿಎಸ್ಆರ್/(G)984/2017-18, ದಿನಾಂಕ: 20-05-2017.

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 12-08-2016ರ ಆದೇಶದಲ್ಲಿ ನಗರೋತ್ಥಾನ ಯೋಜನೆ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2016-17 ಮತ್ತು 2017-18ನೇ ಸಾಲಿನಲ್ಲಿ ಒಟ್ಟು ರೂ.7300.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ ಅನುಮೋದನೆಯನ್ನು ನೀಡಲಾಗಿದ್ದು, ಸದರಿ ಆದೇಶದ ಅನುಬಂಧ-10 ರಲ್ಲಿ 2016-17 ಮತ್ತು 2017-18ನೇ ಸಾಲಿನಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ರೂ.604.00 ಕೋಟಿಗಳನ್ನು ನಿಗಧಿಪಡಿಸಲಾಗಿರುತ್ತದೆ.

2 ಮೇಲೆ (2) ರಲ್ಲಿ ಓದಲಾದ ದಿನಾಂಕ: 10-04-2017ರ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್ಎಫ್ಸಿ 2016 (ಭಾಗ-1), ದಿನಾಂಕ: 12-08-2016ರ ಅನುಬಂಧ-10 ರಲ್ಲಿ 2016-17 ಮತ್ತು 2017-18ನೇ ಸಾಲಿನಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ರೂ.604.00 ಕೋಟಿಗಳನ್ನು ನಿಗಧಿಪಡಿಸಲಾಗಿರುತ್ತದೆ. ಘನತ್ಯಾಜ್ಯ ನಿರ್ವಹಣೆಗೆ 2016-17ನೇ ಸಾಲಿಗೆ ರೂ.75.00 ಕೋಟಿ ಮತ್ತು 2017-18ನೇ ಸಾಲಿಗೆ ಒಟ್ಟು ರೂ.25.00 ಕೋಟಿಗಳು ಮೊತ್ತವನ್ನು ಅನುಮೋದಿಸಿದ್ದು, ಅದರಂತೆ 2016-17ನೇ ಸಾಲಿಗೆ ಘಟಕಗಳ ಸುತ್ತಮುತ್ತಲಿರುವ ಗ್ರಾಮಗಳ ಅಭಿವೃದ್ಧಿಗಾಗಿ ರೂ.75.00 ಕೋಟಿ ಮತ್ತು 2017-18ನೇ ಸಾಲಿಗೆ ರೂ.25.00 ಕೋಟಿ ಮೊತ್ತವನ್ನು ಮೀಸಲಿಡಲಾಗಿರುತ್ತದೆ.

	[illegible]	2016-17 ನೇ ಸಾಲಿನ 2017-18ನೇ ಸಾಲಿನ [illegible] ಅನುದಾನದಲ್ಲಿ ಕ್ರಿಯಾಯೋಜನೆಯಡಿಯಲ್ ಕಾರ್ಯ ಯೋಜನೆ (ರೂ. ಲಕ್ಷಗಳು)
	ಮಾಕಳಿದು	2000.00
	[illegible]	595.00
	ಜಿಗಣಿ	
	ಸೂಲಿಬೆಲೆ	(2500.00+2800.00)=5300.00
	ಲಿಂಗಧೀರನಹಳ್ಳಿ	
	ಮಿಟ್ಟಗಾನಹಳ್ಳಿ	
	ಸಿಬ್ಬರಾಯನಪಾಳ್ಯ	
	ಚಿಕ್ಕನಾಗಮಂಗಲ	3025.00 (20.25+10)10 ಕೋಟಿ ಹೊತ್ತವನ್ನು ಎಸ್.ಇ.ಪಿ. ಅನುದಾನದ ರೋಡ್ ಇನ್‌ಫ್ರಾ ಲೆಕ್ಕಶೀರ್ಷಿಕೆಯಲ್ಲಿ ಸೇರಿಸಲಾಗಿರುತ್ತದೆ.
	ಒಟ್ಟು ಮೊತ್ತ	10920-1000=9920 ಲಕ್ಷಗಳು

3. ಮೇಲೆ ಕೋಷ್ಟಕದಲ್ಲಿ ವಿವರಿಸಿರುವಂತೆ ಈಗಾಗಲೇ ರೂ.99.20 ಕೋಟಿ ಮೊತ್ತದ ಕಾರ್ಯ ಯೋಜನೆ ತಯಾರಿಸಲಾಗಿದ್ದು, ಸದರಿ ಅನುದಾನ ಸಂಪೂರ್ಣವಾಗಿ ಕಾರ್ಯಯೋಜನೆ ರೂಪಿಸಲಾಗಿರುತ್ತದೆ. ಅನೇಕಲ್ ತಾಲ್ಲೂಕು ಎಕ್ಕೀಮರ ಗ್ರಾಮದ ಘನತ್ಯಾಜ್ಯ ಘಟಕದ ತ್ಯಾಪ್ತಿಯ ಗ್ರಾಮಗಳಲ್ಲಿ 12 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.350.00 ಲಕ್ಷ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದರು.

4. ಮೇಲೆ (3) ರಲ್ಲಿ ಓದಲಾದ ದಿನಾಂಕ: 16-05-2017ರ ಸರ್ಕಾರದ ಪತ್ರದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ಘಟಕಗಳ ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿಗಾಗಿ ಹೆಚ್ಚುವರಿ ಅನುದಾನ ನೀಡುವಂತೆ ಕೋರಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಪ್ರಸ್ತಾವನೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಿಂದಿರುಗಿಸಿ, ಕ್ರೋಢೀಕೃತ ವಿಸ್ತೃತವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರನ್ನು ಕೋರಲಾಗಿತ್ತು.

5. ಮೇಲೆ (4) ರಲ್ಲಿ ಓದಲಾದ ದಿನಾಂಕ: 20-05-2017ರ ಪತ್ರದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಕ್ರಿಯಾಯೋಜನೆಗೆ ಕಾಮಗಾರಿಗಳ ವಿವರಗಳನ್ನು ನೀಡಲು ಇನ್ನು ಹೆಚ್ಚಿನ ಕಾಲಾವಕಾಶ ಬೇಕಾಗಿರುವುದರಿಂದ ರೂ.300.00 ಕೋಟಿಗಳಿಗೆ ಈ ಕೆಳಕಂಡಂತೆ ಒಟ್ಟು ರೂ.297.00 ಕೋಟಿಗಳಿಗೆ ಕ್ರಿಯಾಯೋಜನೆ ರೂಪಿಸಿದ್ದು, ಉಳಿದ ರೂ.3.00 ಕೋಟಿಗಳ ಮೊತ್ತವನ್ನು ಪಾಲಿಕೆಯು ಹೊಸ ಕ್ವಾರಿ ಅಥವಾ ತುರ್ತು ಸಂದರ್ಭದಲ್ಲಿ ಕ್ವಾರಿ/ ಸಂಸ್ಕರಣಾ ಘಟಕಗಳ ಸುತ್ತಮುತ್ತಲಿನ ಗ್ರಾಮಾಭಿವೃದ್ಧಿಗೆ ಉಪಯೋಗಿಸಲು ಮೀಸಲಿರಿಸಲು ಅನುಮತಿಸಿ ಹಾಗೂ ಪಾಲಿಕೆಯ ಘನತ್ಯಾಜ್ಯ ವಿಲೇವಾರಿ ಘಟಕಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಿ ಪಾಲಿಕೆಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಸಮಸ್ಯೆ ನಿವಾರಿಸಲು ರೂ.300.00 ಕೋಟಿಗೆ ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸಲು ಕೋರಿರುತ್ತಾರೆ

...3...

ಕ್ರಮ ಸಂಖ್ಯೆ	ಕಟ್ಟಡ/ಸಂಸ್ಕರಣಾ ಘಟಕಗಳ ವಿವರ	ಮೊತ್ತ (ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
1.	ಬೆಳ್ಳಹಳ್ಳಿ ಕ್ವಾರಿ	1500.00
2.	ಮಿಟಗಾನಹಳ್ಳಿ ಕ್ವಾರಿ	1500.00
3.	ಬಾಗಲೂರು ಕ್ವಾರಿ	1500.00
4.	ಬಿಂಗೀಪುರ ಕ್ವಾರಿ	1500.00
5.	ಲಕ್ಷ್ಮೀಪುರ ಕ್ವಾರಿ	1500.00
6.	ಮಾರೇನಹಳ್ಳಿ (ಹೊಸ ಕ್ವಾರಿ)	1500.00
7.	ಉಲ್ಲಹಳ್ಳಿ (ಹೊಸಕ್ವಾರಿ)	1500.00
8.	ಚಿಕ್ಕನಾಗಮಂಗಲ ಸಂಸ್ಕರಣಾ ಘಟಕ	1300.00
9.	ಎಂ.ಎಸ್.ಜಿ.ಪಿ. ಸಂಸ್ಕರಣಾ ಘಟಕ	1000.00
10.	ಮಾವಳ್ಳಿಪುರ ಸಂಸ್ಕರಣಾ ಘಟಕ	1500.00
	ಯಶವಂತಪುರ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಡುವ ಘಟಕದ ಸುತ್ತಲಿನ ಗ್ರಾಮಗಳಲ್ಲಿನ ಅಭಿವೃದ್ಧಿ	
11.	ಕನ್ನಹಳ್ಳಿ ಸಂಸ್ಕರಣಾ ಘಟಕ	2000.00
12.	ಸಿಗೇಹಳ್ಳಿ ಸಂಸ್ಕರಣಾ ಘಟಕ	2000.00
13.	ದೊಡ್ಡಬಿದರಕಲ್ಲು ಸಂಸ್ಕರಣಾ ಘಟಕ	3000.00
14.	ಸುಬ್ಬರಾಯನಪಾಳ್ಯ ಸಂಸ್ಕರಣಾ ಘಟಕ	2000.00
15.	ಲಿಂಗಧೀರನಹಳ್ಳಿ ಸಂಸ್ಕರಣಾ ಘಟಕ	3000.00
	ಯಲಹಂಕ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಡುವ ಘಟಕದ ಸುತ್ತಲಿನ ಗ್ರಾಮಗಳಲ್ಲಿನ ಅಭಿವೃದ್ಧಿ	
16.	ಕನ್ನಹಳ್ಳಿ-ಸಿಗೇಹಳ್ಳಿ ಸಂಸ್ಕರಣಾ ಘಟಕ	2400.00
17.	ದೊಡ್ಡಬಿದರಕಲ್ಲು ಸಂಸ್ಕರಣಾ ಘಟಕ	1000.00
18.	ತುರ್ತು ಸಂದರ್ಭದಲ್ಲಿ ಉಪಯೋಗಕ್ಕಾಗಿ	300.00
	ಒಟ್ಟು	30000.00

6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ನಅಇ 291 ಎಂಷನ್‌ವೈ 2017,
ಬೆಂಗಳೂರು, ದಿನಾಂಕ: 12-12-2017.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ಘಟಕಗಳ ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿಗಾಗಿ ಈ ಕೆಳಕಂಡ ಸಂಸ್ಕರಣಾ ಹಾಗೂ ಭೂಭರ್ತಿ ಪ್ರದೇಶಗಳ ಈ ಕೆಳಕಂಡ ಷರತ್ತಿಗೊಳಪಟ್ಟು ಅನುದಾನವನ್ನು ಒದಗಿಸಲಾಗಿದೆ.

(ರೂ. ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಸಂಸ್ಕರಣಾ ಹಾಗೂ ಭೂಭರ್ತಿ ಪ್ರದೇಶಗಳ ವಿವರ	ಬಿಡುಗಡೆ ಮಾಡಲಾದ ಮೊತ್ತ
1.	ಬೆಲ್ಲಹಳ್ಳಿ, ಬಾಗಲೂರು, ಮಿಟಗಾನಹಳ್ಳಿ ಬಿಂಗೀಪುರ ಹಾಗೂ ಸದರಿ ಕ್ವಾರಿಗಳ ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿಪಡಿಸುವ ಕುರಿತು	40.00
2.	ಚಿಕ್ಕನಾಗಮಂಗಲ ಸಂಸ್ಕರಣಾ ಘಟಕದ ಸುತ್ತಮುತ್ತಲಿನ ಪ್ರದೇಶಾಭಿವೃದ್ಧಿ ಪಡಿಸಲು	10.00
3.	ಮಾವಳ್ಳಿಪುರ ಸಂಸ್ಕರಣಾ ಘಟಕದ ಸುತ್ತಮುತ್ತಲಿನ ಪ್ರದೇಶಾಭಿವೃದ್ಧಿ ಪಡಿಸಲು.	10.00
4.	ಎಂ.ಎಸ್.ಐ.ಪಿ. ಹಾಗೂ ಟೆರ್ರಾಫಾರ್ಮ ಸಂಸ್ಕರಣಾ ಘಟಕಕ್ಕೆ ಸಂಬಂಧಿಸಿದಂತೆ ದೊಡ್ಡಬಳ್ಳಾಪುರ ಸುತ್ತಲಿನ ಪ್ರದೇಶಾಭಿವೃದ್ಧಿಪಡಿಸಲು.	10.00
5.	ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಗರೇಶ್ವರ ನಾಗೇನಹಳ್ಳಿ, ಕೆ.ನಾರಾಯಣಪುರ, ಕೊತ್ತನೂರು, ಕ್ಯಾಲಸನಹಳ್ಳಿ, ಗೆದ್ದಲಹಳ್ಳಿ ಸಂಸ್ಕರಣಾ ಘಟಕಗಳ ಸುತ್ತಲಿನ ಪ್ರದೇಶಾಭಿವೃದ್ಧಿಪಡಿಸಲು	10.00
	ಸ್ವಚ್ಛ ಭಾರತ ಅನುದಾನ	
6.	ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕನ್ನಹಳ್ಳಿ, ಸೀಗೆಹಳ್ಳಿ, ದೊಡ್ಡಬಿದರಕಲ್ಲು, ಲಿಂಗಧೀರನಹಳ್ಳಿ ಹಾಗೂ ಸುಬ್ಬರಾಯನ ಪಾಳ್ಯ ಸಂಸ್ಕರಣಾ ಘಟಕಗಳ ಸುತ್ತಲಿನ ಪ್ರದೇಶಾಭಿವೃದ್ಧಿಪಡಿಸಲು.	25.00
7.	ಕನ್ನಹಳ್ಳಿ, ಸೀಗೆಹಳ್ಳಿ, ದೊಡ್ಡಬಿದರಕಲ್ಲು, ಲಿಂಗಧೀರನಹಳ್ಳಿ, ಸುಬ್ಬರಾಯನ ಪಾಳ್ಯ, ಚಿಕ್ಕನಾಗಮಂಗಲ ಸಂಸ್ಕರಣಾ ಘಟಕಗಳ ದೈನಂದಿನ ನಿರ್ವಹಣೆ.	25.00

ಷರತ್ತುಗಳು:

1. ಮೇಲಿನ ವೆಚ್ಚಗಳನ್ನು ಅನುಮೋದನೆಗೊಂಡ ನಿರ್ದಿಷ್ಟಪಡಿಸಿದ (ಕ್ರಮ ಸಂಖ್ಯೆ: 1 ರಿಂ 5 ಅನ್ನು) "Capital Support for Special Infrastructure Project in Bangalore" (ಲೆಕ್ಕಶೀರ್ಷಿಕೆ: 4217-01-800-0-02) ರಲ್ಲಿ ಕಡಿಮೆ ಟೆಂಡರ್ ಪ್ರೀಮಿಯಂನಿಂದ ಆಗಿರುವ ಉಳಿತಾಯ ಮೊತ್ತದಿಂದ ಭರಿಸತಕ್ಕದ್ದು.
2. ಕ್ರಮ ಸಂಖ್ಯೆ: 6 ಮತ್ತು 7 ನ್ನು "Mukhya Mantri Nairmalya Yojane (Swatcha Bharat)" (ಲೆಕ್ಕ ಶೀರ್ಷಿಕೆ: 2217-80-800-0-35) ರಡಿಯಲ್ಲೇ ಭರಿಸತಕ್ಕದ್ದು.
3. ಕ್ರಮ ಸಂಖ್ಯೆ: 6ರ ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕನ್ನಹಳ್ಳಿ, ಸೀಗೆಹಳ್ಳಿ, ದೊಡ್ಡಬಿದರಕಲ್ಲು, ಲಿಂಗಧೀರನಹಳ್ಳಿ ಹಾಗೂ ಸುಬ್ಬರಾಯನ ಪಾಳ್ಯ ಸಂಸ್ಕರಣಾ ಘಟಕಗಳ ಸುತ್ತಲಿನ ಪ್ರದೇಶಾಭಿವೃದ್ಧಿಪಡಿಸಲು ನೀಡಿರುವ ರೂ.25.00 ಕೋಟಿಗಳ ಮೊತ್ತವನ್ನು ಹಿಂಬರಿಸುವ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ.

ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಪಾಲಿಕೆ-1)

ಪ್ರತಿಗೆ

1. ಮಹಾಲೇಖಪಾಲರು, ಲೆಕ್ಕ ತಪಾಸಣೆ /ಲೆಕ್ಕ ಪತ್ರ ಬೆಂಗಳೂರು, ಕರ್ನಾಟಕ.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು
3. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್-ವಿ.ವಿ.ಕೇಂದ್ರ, ಬೆಂಗಳೂರು.
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಉಪ ನಿರ್ದೇಶಕರು, ಮ್ಯಾನೇಜ್‌ಮೆಂಟ್ ನೆಟವರ್ಕ್, ಖಜಾನೆ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಮುಖ್ಯ ಆರ್ಥಿಕ್ರ ಅಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನ ಸೌಧ, ಬೆಂಗಳೂರು.
11. ಲೆಕ್ಕಾಧೀಕ್ಷಕರು, ತಾಂತ್ರಿಕ ಕೋಶ, ನಗರಾಭಿವೃದ್ಧಿ ಇಲಾಖೆ.
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.